# ಕಿಟ್ಟ ಪುಟ್ಟ

ಕಿಟ್ಟ ಅಂಗಿ ಜೇಬಿನಲ್ಲಿ
ಬಾಳೆಹಣ್ಣು ಇಟ್ಟಿದ್ದ
ಶಾಲೆಯೊಳಗೆ ಬರುವಾಗಲೆ
ಪುಟ್ಟ ಅದನು ನೋಡಿದ್ದ

ಡೆಸ್ಕಿನಲ್ಲಿ ಕಿಟ್ಟ ಕುಳಿತ
ಪುಟ್ಟ ಅವನ ಬಳಿಬಂದ
ಜೇಬಿನಲ್ಲಿ ಏನಿದೆಯೋ?
ಹೇಳು ನೋಡುವೆನು ಅಂದ

ಪುಟ್ಟ ಹಣ್ಣು ಎಗರಿಸಿದ
ಸಿಪ್ಪೆಯೊಡನೆ ತಿಂದ್ಬಿಟ್ಟ
ತುಂಬ ಹಸಿವೆ ಆಗಿತ್ತೋ
ಅದಕೆ ತಿಂದೆ ಅಂದ್ಬಿಟ್ಟ...

ಸಿಪ್ಪೆ ಕೂಡ ತಿಂದೆಯಲ್ಲೊ
ಕಿಟ್ಟ ನಗುತ ಕೇಳಿದನು
ಸಿಪ್ಪೆ ಇರದ ಹಣ್ಣಾವುದು?
ಪುಟ್ಟ ತಿರುಗಿ ಪ್ರಶ್ನಿಸಿದನು...

